# ಬೆಳಕಿನ ಸಂಚಲನ

ಸಂ 2, ಸಂ 4 ಆಗಸ್ಟ್ 2014


## ಒಂದು ಸಂದೇಶ

### ಗುರೂಜಿ ಕೃಷ್ಣಾನಂದ

**ಅನು: ಶ್ರೀದೇವಿ**

(ಅವರ ಭಾಷಣದ ಆಯ್ದ ಭಾಗಗಳು)

ನಮ್ಮ ಕಣ್ಣಿಗೆ ಕಾಣದವರನ್ನು ಅಥವಾ ಕಾಣದಿರುವುದನ್ನು ಪ್ರೀತಿಸುವುದು ಹೇಗೆ? ಬಹಳ ಮಹತ್ವದ ಮತ್ತು ಪ್ರಾಮಾಣಿಕವಾದ ಈ ಪ್ರಶ್ನೆಯನ್ನು ನನ್ನ ಮುಂದಿಡಲಾಯಿತು. ನಾವು ಹಸುವೊಂದನ್ನು ನೋಡಬಹುದು, ಮುಟ್ಟಬಹುದು ಹಾಗೂ ಪ್ರೀತಿಸಬಹುದು. ಜೊತೆಗೆ, ನಾವು ಅದರ ಹಾಲನ್ನು ಕುಡಿಯುತ್ತೇವೆ ಹಾಗೂ ಹಸುವನ್ನೂ ತಿನ್ನುತ್ತೇವೆ ಕೂಡ! ಆದರೆ ಬೆಳಕು, ದೇವರು? ಈ ಬೆಳಕನ್ನು ನಾವು ನೋಡಲು ಸಾಧ್ಯವಿಲ್ಲ, ಸ್ಪರ್ಶಿಸಲು ಸಾಧ್ಯವಿಲ್ಲ, ಮತ್ತೆ ಅದನ್ನು ಹೇಗೆ ಪ್ರೀತಿಸುವುದು! ಹಾಗೂ, ಸಹಜವಾಗಿಯೇ, ನಾವು ಅದನ್ನು ಕುಡಿಯುವುದಕ್ಕಾಗಲಿ ಅಥವಾ ತಿನ್ನುವುದಕ್ಕಾಗಲಿ ಆಗುವುದಿಲ್ಲ! ನನ್ನ ಸ್ನೇಹಿತ, ಒಬ್ಬ ವಿಜ್ಞಾನಿ, ಈ ಎಲ್ಲಾ ಪ್ರಶ್ನೆಗಳನ್ನು ಬಹಳ ಗಂಭೀರವಾಗಿ ನನಗೆ ಕೇಳಿದ. ನಾನು ಒಂದು ನಿಮಿಷ ಅವನನ್ನೇ ದಿಟ್ಟಿಸಿ ನೋಡಿದೆ!

ನಾವು ಅನೇಕ ವಸ್ತುಗಳನ್ನು ನೋಡುವುದಿಲ್ಲ ಅದರೂ ಅವುಗಳ ಇರುವಿಕೆಯು ಅನುಭವದಿಂದ ನಮಗೆ ತಿಳಿದಿದೆ. ಹಾಲಿನಲ್ಲಿರುವ ಸಿಹಿ, ಹೂವಿನ ಪರಿಮಳ, ಬೇರೆ ಲೋಕಗಳಲ್ಲಿರುವ ನಮ್ಮನ್ನಗಲಿದ ಆತ್ಮಗಳು ... ಈ ಎಲ್ಲವನ್ನೂ ನಾವು ಪ್ರೀತಿಸುತ್ತೇವೆ. ಬೆಳಕು ಇದೆ, ದೇವರು ಇದ್ದಾನೆ. ನಮಗೆ ಬೆಳಕನ್ನು ಪ್ರೀತಿಸಲು ಏಕೆ ಸಾಧ್ಯವಿಲ್ಲ?

ಅನುಭವ ಬಹಳ ಮಹತ್ವದ್ದು ಎಂದು ನನಗೆ ಅನ್ನಿಸುತ್ತದೆ. ಆದ ಕಾರಣ ನಾವು ಧ್ಯಾನ ಮಾಡಬೇಕು ಮತ್ತು ಉನ್ನತ ಸ್ತರಗಳ ವಾಸ್ತವಗಳನ್ನು ಅನುಭವಿಸಬೇಕು. ಚಂದ್ರನನ್ನು ಅನುಭವಿಸುವುದು ಸುಲಭ ಹಾಗೂ ಇಡೀ ಬೆಳದಿಂಗಳನ್ನು ಅನುಭವಿಸುವುದು ಕಷ್ಟವಲ್ಲ.

## ಘಟನಾವಳಿಗಳು

### ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ

ಚಟುವಟಿಕೆಯಿಂದ ತುಂಬಿದ್ದ ಜೂನ್ ತಿಂಗಳ ನಂತರ ನಮ್ಮ ಲೈಟ್ ಚಾನಲ್ ಕಾರ್ಯಕರ್ತರು ಜುಲೈನಲ್ಲೂ ಅತ್ಯುತ್ಸಾಹದಿಂದ ಕೆಲಸವನ್ನು ಮುಂದುವರೆಸಿದರು ಹಾಗೂ ಸರಿಸುಮಾರು 56 ಶಾಲೆಗಳ 15,000 ಹೊಸ ಮಕ್ಕಳಿಗೆ ಲೈಟ್ ಚಾನಲಿಂಗ್‌ಅನ್ನು ಪರಿಚಯಿಸಿದರು. ಭಾರತದಾದ್ಯಂತ 564 ಶಾಲೆಗಳಲ್ಲಿ ನೂರಾರು ಸೆಷನ್‌ಗಳನ್ನು ನಡೆಸಿದರು. ಈ ಸೆಷನ್‌ಗಳಲ್ಲಿ 1.81 ಲಕ್ಷ ಮಕ್ಕಳು ಲೈಟ್ ಚಾನಲ್ ಮಾಡಿದರು.


ನಮ್ಮ ಲೈಟ್ ಚಾನಲ್ ಕಾರ್ಯಕರ್ತರು ನಡೆಸಿದ ಈ ಸೆಷನ್‌ಗಳಲ್ಲದೆ, 1100ಕ್ಕೂ ಹೆಚ್ಚು ಶಾಲೆಗಳಲ್ಲಿ ಲೈಟ್ ಚಾನಲಿಂಗ್ ನಿಯತವಾಗಿ ಮುಂದುವರೆಯುತ್ತಿದೆ. ಇದರಲ್ಲಿ 5 ಲಕ್ಷಕ್ಕೂ ಅಧಿಕ ಮಕ್ಕಳು ತಮ್ಮ ಶಾಲೆಗಳಲ್ಲಿ, ಬಹುತೇಕ ಪ್ರತಿಯೊಂದು ಕೆಲಸದ ದಿನದಲ್ಲೂ ಲೈಟ್ ಚಾನಲ್ ಮಾಡುತ್ತಾರೆ.

## ಬೆಳಕಿನ ಕ್ರಿಯಾಶಕ್ತಿ

### ಮನೋಜ್ ಚೋಪ್ರ; ಅನು: ಶ್ರೀದೇವಿ

ದಿನ ಕಳೆದಂತೆ, ಲೈಟ್ ಚಾನಲಿಂಗ್ ಸಂಚಲನ ಬಲಗೊಳ್ಳುತ್ತಿದೆ. ಅನೇಕ ಶಾಲಾ ಅಧಿಕಾರಿಗಳು ತಮ್ಮ ಶಾಲೆಗಳಲ್ಲಿ ಲೈಟ್ ಚಾನಲಿಂಗ್‌ಅನ್ನು ನಿಯತಗೊಳಿಸುವುದರ ಮೂಲಕ ಹೆಚ್ಚು ಭಾಗಿಯಾಗಿರುವುದು ಈ ಸಂಚಲನವನ್ನು ವೈಶಿಷ್ಟ್ಯಪೂರ್ಣ ಹಾಗೂ ಸಾರ್ವತ್ರಿಕವನ್ನಾಗಿ ಮಾಡುತ್ತದೆ. ಬೆಳಕು ಕೂಡ ಬಹು ಬೇಗ ಹರಡಿ ಹೆಚ್ಚು ಹೆಚ್ಚು ಆತ್ಮಗಳಲ್ಲಿ ಅರಿವು ಮೂಡಿಸಲು ಬಯಸುತ್ತದೆ. ನಮ್ಮ ಭೂಮಿಯ ಮೇಲೆ ಇರುವ ಪ್ರತಿಯೊಂದು ಆತ್ಮವನ್ನೂ ಬೆಳಕು ಸ್ಪರ್ಶಿಸಲಿ.

ನಮ್ಮ ಪ್ರೀತಿಯ ಗುರುಗಳಾದ ಆಮರರವರ ಮಹಾಸಮಾಧಿ ದಿನವನ್ನು ಆಗಸ್ಟ್ 25ರಂದು ಆಚರಿಸುತ್ತಿದ್ದೇವೆ. ಮನುಕುಲದ ಏಳಿಗೆಗಾಗಿ ಅವರು ಸದ್ದಿಲ್ಲದೆ ಕೆಲಸ ಮಾಡಿದರು ಹಾಗೂ ಪ್ರಚಾರದಿಂದ ದೂರ ಉಳಿದರು. ಅವರ ಧ್ಯೇಯ ಬೇರೆಯಾಗಿತ್ತು. ಹೊಸಯುಗದ ಉದಯಕ್ಕಾಗಿ ಹಲವಾರು ಪ್ರಕ್ರಿಯೆಗಳನ್ನು ಅವರು ಆರಂಭಿಸಿದರು. ಅವರು ಒಬ್ಬ ವಿಶೇಷವಾದ ದೇವ ದೂತರಾಗಿದ್ದರು. ಅವರೇ ನಮ್ಮ ಕೆಲಸದ ಹಿಂದೆ ಇರುವ ಸ್ಫೂರ್ತಿ. ನಾವು ಒಟ್ಟಿಗೆ ಕೆಲಸ ಮಾಡಿ ಅವರ ಕನಸುಗಳನ್ನು ನನಸು ಮಾಡೋಣ.



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.


**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ. 890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9972888033 ಕಾರ್ತಿಕ್ ಎನ್.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೇಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ, 8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಚೆನ್ನೈನ ಆರುಂಬುಗಲ್ ಆಲಯಮ್‌ನಲ್ಲಿ ಮಕ್ಕಳು ಲೈಟ್ ಚಾನಲ್ ಮಾಡುತ್ತಿರುವುದು

## ಪ್ರಮುಖ ಘಟನೆಗಳು

- ಜನವರಿ 31, 2014, ನಾಲ್ಕನೇ ವಿಶ್ವ ಚಾನಲ್ಸ್ ದಿನ – ಭಾರತದಾದ್ಯಂತ 2100 ಶಾಲೆಗಳ 10 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 - ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.
- ಫೆಬ್ರವರಿ 1, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ದಕ್ಷಿಣ ಭಾರತದ 50 ಶಾಲೆಗಳನ್ನು ಸಂಪರ್ಕಿಸಿ ಸುಮಾರು 30,000 ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನಕ್ಕೆ ಭಾರಿ ಚಾಲನೆ ನೀಡಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4676 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 26.23 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1140 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.18 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ನೀನು ಕೇವಲ ಒಬ್ಬ ಮೇಲ್ವಿಚಾರಕಿ

**ಪದ್ಮಜ ಬಾಲಾಜಿ, ಅನು: ಶ್ರೀದೇವಿ**

ಬೆಳಗಿನ ಶುಭ್ರ ಆಕಾಶವನ್ನು ನೋಡುತ್ತಾ ನಮ್ಮ ಹೊಸದಾಗಿ ಬದಲಾಯಿಸಿದ ಮನೆಯ ಮುಂದಿನ ವರಾಂಡದಲ್ಲಿ ಕುಳಿತೆ. ವಾತಾವರಣದ ನಿಶ್ಚಲತೆಯು ನನ್ನ ಶಾರೀರಿಕ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುತ್ತಿರುವುದನ್ನು ಅನುಭವಿಸುವುದರಲ್ಲಿ ಎಂತಹ ಆನಂದವಿತ್ತು. ಆಗ ಕೈಯಲ್ಲಿದ್ದ ಬಿಸಿ ಕಾಫಿಯೂ ಕೂಡ ಕೆಲಸ ಮಾಡಲು ಅವಕಾಶವಾಯಿತು. ಇದರ ಜೊತೆಗೆ, ನಿರಂತರ 'ಬದಲಾವಣೆ' ನನ್ನ ಜೀವನವನ್ನು ಭರವಸೆಯೊಂದಿಗೆ ಬೆಳಗುತ್ತಿರುವುದರ ಬಗ್ಗೆ ಉಲ್ಲಾಸಗೊಂಡೆ.

ಕಾಫಿ ಮುಗಿಯುತ್ತಾ ಬಂದಂತೆ, ಎಲ್ಲಿಂದಲೋ ಒಂದು ಆಲೋಚನೆ ಥಟ್ಟನೆ ಹೊಳೆಯಿತು 'ನೀನು ಕೇವಲ ಒಬ್ಬ ಮೇಲ್ವಿಚಾರಕಿ'. ಈ ಆಲೋಚನೆ ಎಲ್ಲಿಂದ ಬಂತೆಂದು ವಿಸ್ಮಯಗೊಂಡೆ. ಇಂತಹ ಆಲೋಚನೆಗಳ ಮೂಲ ಆಂತರಿಕ ಅಥವಾ ಬಾಹ್ಯದ್ದಾಗಿರಬಹುದು ಎನ್ನುವುದು ನಿಮಗೆ ತಿಳಿದಿರಬಹುದು. ಆಂತರಿಕವಾದದ್ದು ಅಂತರ್ಭೋರ್ದೆಯಿಂದ ಗ್ರಹಿಸಿದ್ದಾಗಿರಬಹುದು ಅಥವಾ ಮನಸ್ಸು ಪ್ರಚೋದಿಸಿದ್ದಾಗಿರಬಹುದು. ಆದರೆ, ಬಾಹ್ಯದಿಂದ ಬರುವ ಆಲೋಚನೆಗಳ ಬಗ್ಗೆ ನಾವು ಜಾಗರೂಕರಾಗಿರಬೇಕು.

ಎಲ್ಲಾ ಆವರ್ತನಗಳ ಚೈತನ್ಯವನ್ನು ಹೊಂದಿರುವ ಆಲೋಚನೆಗಳು ನಮ್ಮ ವಾತಾವರಣದಲ್ಲಿ ಮುಕ್ತವಾಗಿ ಸುಳಿದಾಡುತ್ತಿರುತ್ತವೆ. ನಮ್ಮ ಶಾರೀರಿಕ ವ್ಯವಸ್ಥೆಯು ಈ ಆಲೋಚನೆಗಳನ್ನು ಸೆಳೆದುಕೊಳ್ಳುವ ಸಾಧ್ಯತೆಯಿದೆ. ಅವುಗಳು ನಮ್ಮ ಶಾರೀರಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀರಬಹುದು ಅಥವಾ ಹಾನಿ ಮಾಡಬಹುದು. ರಾತ್ರಿ ಹೊತ್ತಿನ ರೈಲು ಪ್ರಯಾಣಗಳ ಸಮಯದಲ್ಲಿ, ಹಿಂಸೆಯಿಂದ ಕೂಡಿದ ದುಃಸ್ವಪ್ನಗಳನ್ನು ಕಂಡಿದ್ದೆ. ಅದು ನನ್ನ ಮನಸ್ಸನ್ನು ತೀವ್ರವಾಗಿ ಕ್ಷೋಭೆಗೊಳಿಸಿತ್ತು. ಅವುಗಳು ನನ್ನ ಆಲೋಚನೆಗಳಲ್ಲ ಎನ್ನುವುದನ್ನು ನನ್ನ ಗುರುಗಳಿಂದ ಖಾತರಿಪಡಿಸಿಕೊಂಡಾಗ ನನಗೆ ಸಮಾಧಾನವಾಯಿತು. ಬೆಳಕಿನ ಸಹಾಯದಿಂದ ನಮ್ಮ ಶಾರೀರಿಕ ವ್ಯವಸ್ಥೆಯನ್ನು ರಕ್ಷಿಸುವುದು ಎಷ್ಟು ಮುಖ್ಯವೆಂದು ಆಗ ಅರಿತುಕೊಂಡೆ.

ಥಟ್ಟನೆ ಹೊಳೆದ ಆ ಆಲೋಚನೆಗೆ ಪುನಃ ಬರೋಣ, ಅದು ಬಾಹ್ಯದಿಂದ ನುಗ್ಗಿದ ಆಲೋಚನೆಯಾಗಿರಲಿಲ್ಲ ಎನ್ನುವುದನ್ನು ನಾನು ಅರಿತೆ.

* * * * * * *

"ನೀನು ಕೇವಲ ಒಬ್ಬ ಮೇಲ್ವಿಚಾರಕಿ"

"ಹಾಗೆಂದರೆ ಏನು?"

"ಶರೀರ, ಮನಸ್ಸು ಮತ್ತು ಬುದ್ಧಿಗಳು ಈ ಜೀವನವನ್ನು ಅನುಭವಿಸಲು ನಿನಗೆ ಉಡುಗೊರೆಯಾಗಿ ಕೊಟ್ಟಿರುವ ವಿವಿಧ ಕೋಶಗಳು. ಅದು ನಿನ್ನದಾಗಿರಲಿ ಅಥವಾ ಬೇರೆಯವರದಾಗಿರಲಿ, ಅವುಗಳನ್ನು ಎಚ್ಚರಿಕೆಯಿಂದ ನೋಡಿಕೋ"

"ಓ ... ನನ್ನ ಇಚ್ಛಾ ಸ್ವಾತಂತ್ರ್ಯವನ್ನು ಬೇರೆಯವರು ಅದುಮಿ ಹಾಕಿದರೆ ಹೇಗೆ?

ಅನಾರೋಗ್ಯ, ಶರೀರದಲ್ಲಾಗಲಿ ಅಥವಾ ಮಾನಸಿಕವಾಗಲಿ, ಅಸಮತೋಲನವನ್ನು ತರುತ್ತದೆ. ಜೋಪಾನವಾಗಿ ಅವುಗಳನ್ನು ನೋಡಿಕೊಳ್ಳುವ ಮೇಲ್ವಿಚಾರಕಳಾಗು".

"ಹಾಗಿರುವುದರಿಂದ ನನಗೇನು ಪ್ರಯೋಜನ?"

"ನಿನ್ನ ಭಾಷೆಯಂತೆ ಏನೂ ಸಿಗುವುದಿಲ್ಲ ಆದರೆ ಹೆಚ್ಚು ಬೆಳಕು ನಿನಗೆ ಸೇರ್ಪಡೆಯಾಗುವುದು. ಇಡೀ ವಿಶ್ವದಲ್ಲಿ, ಅನಂತಕಾಲದವರೆಗೆ, ಇತರರ ಮೇಲೆ ಪರಿಣಾಮ ಬೀರುವುದಕ್ಕಾಗಿ ಜೀವನದ ಶ್ರೇಷ್ಠತೆಯನ್ನು ಸದ್ದಿಲ್ಲದೆ ಕಂಪಿಸಲು ನಿನ್ನ ಜೀವನ ಮುಂದುವರೆಯುವುದು. ನೀನು ಇಲ್ಲಿ ಉತ್ತಮವಾಗಿ ಜೀವನ ನಡೆಸುವುದರ ಮೂಲಕ ವಿಶ್ವ ದರ್ಪಣದಲ್ಲಿ ಸುಂದರವಾದ ಮುದ್ರೆಯೊಂದನ್ನು ಬಿಟ್ಟು ಹೋಗುತ್ತೀಯ".

"ನೀನು ಯಾರು?"

"ನಿನ್ನ ಪ್ರತಿಬಿಂಬ."

* * * * * * *

ನಿಶ್ಶಬ್ದವನ್ನು ಸೀಳಿಕೊಂಡು ಹತ್ತಿರದಲ್ಲಿಯೇ ಇದ್ದ ಗಂಡು ಮತ್ತು ಹೆಣ್ಣು ನವಿಲುಗಳ ವಿನೋದವು ಗಟ್ಟಿಯಾಗಿ ಕೇಳಿಸಿತು. ಬೆಳಕು ನನ್ನ ಕನ್ನಡಿಯಾಗಿ, ಜೀವನ ಸುಂದರವಾಗಿ ಕಂಡಿತು. ■

## ಲೈಟ್ ಚಾನಲಿಂಗ್ ಕೇಂದ್ರಗಳು

### ಮೈಸೂರು
ಬುಧವಾರ (ಸಂಜೆ 6)
ಇನ್ಫೋಸಿಸ್ ಲಿ, ಹೆಬ್ಬಾಳ್ ಎಲೆಕ್ಟ್ರಾನಿಕ್ಸ್ ಸಿಟಿ,
ಹೂಟಗಳ್ಳಿ, ಮೈಸೂರು-570018
☎ 9980837179, ಶ್ರೀ ಆನಂದ್ ನಿರಂಜನ್
☎ 8095026224, ಶ್ರೀ ಆಕಾಶ್ ಮಲ್ಲಿಕ್

### ಸೋಲಾಪೂರ್
ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ
ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.


### ತಿರುನಲ್ವೇಲಿ
ಪ್ರತಿ ದಿನ (ಸಂಜೆ 7:00 - 7:30)
ವಡಕ್ಕು ತೆರು, ಚೆಲ್ಲಾ ಪಿಳ್ಳೈಯಾರ್ ಕುಲಮ್
ಎ.ಪಿ. ನಾದನೂರ್ ಪೋಸ್ಟ್
ಆಲಂಗುಲಮ್ ತಾಲ್ಲೂಕು - 627423
☎ 9444458747, ಶ್ರೀ ಮಾರಿಯಪ್ಪನ್ ಎನ್.


### ಪುಣೆ
ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್

ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ
ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್
ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್
















## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ನವೆಂಬರ್ 2013 ಕ್ಕೆ ಮೊದಲು ನನ್ನ ಸೋದರಸಂಬಂಧಿಯೊಬ್ಬ ತನ್ನ ವಿದ್ಯಾಭ್ಯಾಸದಲ್ಲಿ ಬಹಳ ಕಷ್ಟಪಡುತ್ತಿದ್ದ. ಅವನು 9ನೇ ತರಗತಿಯಲ್ಲಿ 48% ಅಂಕಗಳನ್ನು ಪಡೆದಿದ್ದ. ಅವನು ಅಹಂಭಾವದವನಾಗಿದ್ದ. ಮನೆಪಾಠದ ಇಬ್ಬರು ಅಧ್ಯಾಪಕರು ಅವನ ಬಗ್ಗೆ ಆಸೆ ಕಳೆದು ಕೊಂಡಿದ್ದರು. ಆಗ, ನವೆಂಬರ್ 2013ರಲ್ಲಿ ನಾನು ಅವನಿಗೆ ಲೈಟ್ ಚಾನಲಿಂಗ್, ಸಪ್ತರ್ಷಿ ಪ್ರಾಣಾಯಾಮ, ಶಂಬಲದ ಮೊದಲನೇ ನಿಯಮ ಮತ್ತು ಜ್ಞಾಪಕಶಕ್ತಿಯನ್ನು ಹೆಚ್ಚಿಸುವ ತಂತ್ರಗಳನ್ನು ಹೇಳಿಕೊಟ್ಟೆ. ಅವನು ಅತ್ಯಂತ ಶ್ರದ್ಧೆಯಿಂದ ಅವುಗಳ ಅಭ್ಯಾಸ ಮಾಡಿದ. ಅವನ ಅವ್ಯವಸ್ಥಿತ ನಡವಳಿಕೆ ಕಡಿಮೆಗೊಂಡಿತು. ಅವನು ಶಾಂತನಾದ ಹಾಗೂ ಅವನ ಅರ್ಥೈಸುವ ಶಕ್ತಿ ಹೆಚ್ಚಿತು. ಈ ಹಿಂದೆ ಅವನು ಆಕ್ರಮಣಕಾರಿ ಮತ್ತು ದುರಹಂಕಾರದ ವ್ಯಕ್ತಿಯಾಗಿದ್ದ. ಈ ನಿಟ್ಟಿನಲ್ಲಿ ಈಗ ಸುಧಾರಣೆಯಾಗಿದೆ. ಅವನಿಗೆ ಬೆಳಕಿನ ಅನುಭವವಾಗಿದೆ ಹಾಗೂ ಆಧ್ಯಾತ್ಮಿಕ ಮತ್ತು ಲೌಕಿಕ ಮಟ್ಟಗಳೆರಡರಲ್ಲೂ ಅದ್ಭುತ ಅನುಭವಗಳಾಗಿವೆ. ಆತ ತನ್ನ 10ನೇ ತರಗತಿಯಲ್ಲಿ 84% ಅಂಕಗಳನ್ನು ಪಡೆದಿದ್ದಾನೆ!

ಅವನ ಗಣಿತದ ಪರೀಕ್ಷೆಯ ಸಮಯದಲ್ಲಿ ಒಂದು ಪ್ರಶ್ನೆಗೆ ಉತ್ತರವು ಆತನಿಗೆ ಮರೆತು ಹೋಯಿತು. ಅವನು ಬೆಳಕನ್ನು ಪ್ರಾರ್ಥಿಸಿದ, ಆಗ ಆ ಪ್ರಶ್ನೆಗೆ ಉತ್ತರವು ನೆರಳಿನ ರೂಪದಲ್ಲಿ ಅವನ ಉತ್ತರ ಪತ್ರಿಕೆಯ ಮೇಲೆ ಅವನಿಗೆ ಕಾಣಿಸಿತು.

ಒಮ್ಮೆ ಜೋರಾಗಿ ಮಳೆ ಸುರಿಯಿತು ಮತ್ತು ಬಿರುಗಾಳಿಯು ಅಲ್ಲೋಲಕಲ್ಲೋಲವನ್ನು ಉಂಟು ಮಾಡಿತ್ತು. ಅವನ ಮನೆಯಲ್ಲೊಂದು ಮಾವಿನ ಮರವಿತ್ತು ಮತ್ತು ಅದರಲ್ಲಿನ ಮಾವಿನಕಾಯಿಗಳು ಬಿದ್ದುಹೋಗಬಾರದೆಂದು ಅವನು ಬಯಸಿದ್ದ. ಅದಕ್ಕಾಗಿ ಅವನು ಬೆಳಕನ್ನು ಪ್ರಾರ್ಥಿಸಿದ. ಎಲ್ಲೆಡೆ ನೂರಾರು ಮರಗಳು ಮತ್ತು ವಿದ್ಯುತ್ ಕಂಬಗಳು ಉರುಳಿದವು, ನೀರಿನ ಟ್ಯಾಂಕುಗಳು ಬಿದ್ದು ಹೋದವು, ಅನೇಕ ಮನೆಗಳ ಛಾವಣಿಗಳು ಹಾರಿದವು, ಆದರೆ ಆ ಮರದ ಒಂದೇ ಒಂದು ಕಾಯಿಯೂ ಬೀಳಲಿಲ್ಲ!

– ನಿಖಿಲ್ ಗಾಂಧಿ, ಲೈಟ್ ಚಾನಲ್

ನಾನು ಪ್ರತಿದಿನ ಲೈಟ್ ಚಾನಲ್ ಮಾಡುತ್ತೇನೆ. ಈಗ ನನ್ನ ಮಗುವಿನೊಂದಿಗೆ ನಾನು ಉತ್ತಮ ರೀತಿಯಲ್ಲಿ ವರ್ತಿಸುತ್ತಿದ್ದೇನೆ. ಲೈಟ್ ಚಾನಲ್ ಮಾಡುವಾಗ ನನ್ನ ಶರೀರ ಹಗುರವಾದಂತೆ ಅನಿಸುತ್ತದೆ ಮತ್ತು ಅದರ ಅಭ್ಯಾಸದ ನಂತರ ಕಣ್ಣುಗಳನ್ನು ತೆರೆಯಬೇಕೆನಿಸುವುದಿಲ್ಲ. ಹಾಗೂ ಈ ಮೂರು ದಿನಗಳಲ್ಲಿ ನಾನು ಮೈಗ್ರೇನ್ ಶಮನಕ್ಕಾಗಿ ಮಾತ್ರೆಗಳನ್ನು ಸೇವಿಸಬೇಕಾಗಲಿಲ್ಲ.

– ಶ್ರೀಮತಿ ಸುಗಂಧಿಯಾ, ಶಿಕ್ಷಕಿ, ವಿಶ್ವ ಶಿಷ್ಯ ವಿದ್ಯೋದಯ ಶಾಲೆ, ಪೊಲ್ಲಾಚಿ

ಜೂನ್ 21ರಂದು ಲೈಟ್ ಚಾನಲಿಂಗ್ ಸೆಷನ್‌ಗಾಗಿ ಸಿಲಿಕಾನ್ ವ್ಯಾಲಿ ಶಾಲೆಗೆ ಹೋಗಿದ್ದಾಗ ಆ ಶಾಲಾ ಮುಖ್ಯೋಪಾಧ್ಯಾಯರು ಅಲ್ಲಿದ್ದ ಕಿರಿಯ ಪ್ರಾಥಮಿಕ ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ತರಗತಿಗಳಿಗೆ ಹೋಗುವಂತೆ ಹೇಳಿದರು. ಉಳಿದ ಮಕ್ಕಳು ಕುಳಿತು ಕೊಂಡರು, ಆದರೆ ಅವರಿಗೆ ಏನೂ ಕೇಳಿಸುತ್ತಿರಲಿಲ್ಲ. ಕಾರಣ ಅಲ್ಲಿ ಧ್ವನಿವರ್ಧಕದ ವ್ಯವಸ್ಥೆ ಇರಲಿಲ್ಲ ಮತ್ತು ಪ್ರಾಥಮಿಕ ತರಗತಿಯ ಮಕ್ಕಳ ಗಲಾಟೆ ಸಹ ನಮಗೆ ಜೋರಾಗಿ ಕೇಳಿಸುತ್ತಿತ್ತು. ನಾವು ಕಾರ್ಯಕರ್ತರೆಲ್ಲರೂ ವೇದಿಕೆಯಿಂದ ಕೆಳಗಿಳಿದು ಮಕ್ಕಳ ಹತ್ತಿರ ನಿಂತುಕೊಂಡು ಲೈಟ್ ಚಾನಲಿಂಗ್ ಸೆಷನ್‌ನನ್ನು ಮುಂದುವರೆಸಿದೆವು. ಮರು ಕ್ಷಣವೇ ನನಗೆ ಶಾಂತತೆಯ ಅನುಭವವಾಯಿತು. ಪ್ರಾಥಮಿಕ ತರಗತಿಯ ಮಕ್ಕಳ ಗಲಾಟೆ ಸ್ಥಳದಿಂದ ನಾವು ಲೈಟ್ ಚಾನಲಿಂಗ್ ನಡೆಸುತ್ತಿದ್ದ ಶಾಲೆಯ ಭಾಗ ಬೇರೆಯಾದ ಅನುಭವವಾಯಿತು. ಒಂದು ಕ್ಷಣ ನನಗೆ ಇವೆರಡು ಬೇರೆ ಬೇರೆ ಪ್ರಪಂಚಗಳಂತೆ ಭಾಸವಾಯಿತು. ನಾನು ಶಾಂತಮನಸ್ಕಳಾಗಿದ್ದೆ. ಈ ರೀತಿಯ ಅನುಭವ ನನಗೆ ಹಿಂದೆ ಎಂದೂ ಆಗಿರಲಿಲ್ಲ.

ಲೈಟ್ ಚಾನಲಿಂಗ್ ದಿನದ ಮುಂಜಾನೆ, ಶಾಲೆಗೆ ಹೋಗುತ್ತಿದ್ದ ಸಮಯದಲ್ಲಿ ನನ್ನಲ್ಲಿದ್ದ ಸೋಮಾರಿತನ ಮಾಯವಾಗಿ, ಶಿಸ್ತುಬದ್ಧ ಳಾಗಿದ್ದಂತೆ ಅನಿಸಿತು. ನನ್ನ ನೋವೆಲ್ಲ ಬೇರೆ ಯಾರೋ ತೆಗೆದುಕೊಂಡಂತೆ ಭಾಸವಾಯಿತು ಹಾಗೂ ಬೆಳಕಿನ ಅನುಭವವಾಯಿತು. ಇತ್ತೀಚಿನ ಲೈಟ್ ಚಾನಲಿಂಗ್ ಸೆಷನ್‌ಗಳಲ್ಲಿ ದೈವದ ಉಪಸ್ಥಿತಿಯ ಅನುಭವವಾಯಿತು.

ಜೂನ್ 18ರಂದು, ಗಣಕಲ್ಲು ಊರಿನ ಶಾಲೆಯೊಂದರಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸಿದೆವು. ಶಿವನ ದೇವಸ್ಥಾನದ ಸಮೀಪದಲ್ಲಿ ಈ ಶಾಲೆ ಇದೆ. ಅಲ್ಲಿ ಒಂದು ದೊಡ್ಡ ಮರವಿದೆ. ಸೆಷನ್ ಮುಗಿದ ನಂತರ ನನಗೆ ಆ ಮರದ ಹತ್ತಿರ ಬಹಳ ಸಮಯ ಕಳೆಯಬೇಕೆನಿಸಿತು. ನನಗೆ ಆ ಮರದ ಅಗಾಧ ಪ್ರೀತಿಯ ಅನುಭವ ಎಷ್ಟೊಂದಾಯಿತೆಂದರೆ ಸುಮಾರು ಒಂದು ಗಂಟೆಯವರೆಗೆ ಅಲ್ಲಿಯೇ ಕುಳಿತು ಮರ ನೀಡುತ್ತಿದ್ದ ಪ್ರೀತಿಯನ್ನೆಲ್ಲ ನನ್ನೊಳಗೆ ಅಂತರ್ಗತ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿದೆ. ಕಳೆದ ವರ್ಷ ಸಹ ಇಲ್ಲಿಯೇ ಮೊದಲ ಸೆಷನ್ ಮಾಡಿದ್ದೆವು. ಯಾವಾಗಲಾದರು ಬೇಸರವೆನಿಸಿದಾಗ ಈ ಸ್ಥಳಕ್ಕೆ ಬಂದು ಧ್ಯಾನ ಮಾಡಬೇಕೆನಿಸುತ್ತದೆ. ಆ ಮರದ ಪ್ರೀತಿ ಮತ್ತು ಅನುಗ್ರಹ ನನ್ನ ಹೃದಯವನ್ನು ತಟ್ಟಿದೆ.

ಇಂಥ ಅದ್ಭುತ ಅನುಭವಗಳನ್ನು ಕೊಡುತ್ತಿರುವ ಮತ್ತು ವಯಕ್ತಿಕ ಮಾರ್ಗದರ್ಶನ ನೀಡುತ್ತಿರುವ ಗುರೂಜಿ, ಅಮರಾಜೀ ಮತ್ತು ಋಷಿಗಳಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

– ಹೇಮಲತ ಪ್ರಮೋದ್, ಕಾರ್ಯಕರ್ತೆ

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016